**ದಿನಾಂಕ 06.09.2021 ರಂದು ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಶ್ರೀ ಎಸ್.ಜಗನಾಥ ವಕೀಲರಿಂದ ಎದುರುದಾರ 21 ರವರ ಪರವಾಗಿಃ**

12. ಉಮ್ಮಡಹಳ್ಳಿ ಗ್ರಾಮದ ಸರ್ವೆ ನಂ.131/9 ಕ್ಷೇತ್ರ 202 sq. mt ಸರ್ಕಾರದವರು ಸ್ವಾಧೀನ ಪಡಿಸಿಕೊಂಡಿದ್ದಾರೆ ಎನ್ನುವುದು ನಿಜ. ಸರ್ವೆ ನಂ.131/9 ಕ್ಷೇತ್ರ 2 ಎಕರೆ ಎದುರುದಾರ 21 ಎಂ.ವಿವೇಕಾನಂದ ಇವರಿಗೆ ಕರಾರು ಪತ್ರ ಆಗಿದೆ ಅನ್ನುವುದು ನನಗೆ ಗೊತ್ತಿಲ್ಲ. ನನ್ನ ಸೈಟು ನಂ.97 ಇದು ಸರ್ವೆ ನಂ. 131 ರಲ್ಲಿ ಬರುತ್ತದೆ. ಸರ್ವೆ ನಂ.131/9 ಜಮೀನಿಗೂ ನಮಗೂ ಸಂಬಂಧ ಇಲ್ಲ ಎನ್ನುವುದು ನಿಜ. ಸರ್ವೇ ನಂ.131/9 ಕ್ಷೇತ್ರ 202 sq. mt ನೆ ದಕ್ಕೆ ಸಂಬಂದಿಸಿದ ರೂ.24,89,660/- ಹಣಕ್ಕೆ ನಮಗೆ ಸಂಬಂಧ ಇರುವುದಿಲ್ಲ ಎನ್ನುವುದು ನಿಜ. ಸರ್ವೆ ನಂ.131/9 ರಲ್ಲಿ ಸ್ವಾದೀನ ಪಡಿಸಿಕೊಂಡ ಜಮೀನಿಗೂ ನಮಗೂ ಸಂಬಂಧ ಇರುವುದಿಲ್ಲ ಎನ್ನುವುದು ನಿಜ. ಆ ಸರ್ವೆ ನಂಬರಿನ ಪರಿಹಾರ ಹಣಕ್ಕೂ ನಮಗೂ ಸಂಬಂಧ ಇರುವುದಿಲ್ಲ.

**ಪಾಟೀ ಸವಾಲುಃ ಶ್ರೀ ಎಂ.ಜೆ.ಜೈನ್ ವಕೀಲರಿಂದ ಎದುರುದಾರ 1 ರಿಂದ 5 ರವರ ಪರವಾಗಿಃ**

13. ಈಗ ತೋರಿಸಿದ ನಿಡಿ.14 ಕ್ರಯ ಪತ್ರ ನೋಡುತ್ತಿದ್ದೇನೆ ಸದರಿ ಕ್ರಯ ಪತ್ರವನ್ನು ಎದುರುದಾರ 10 ಪಶುಪತಿ, ಕುಟುಂಬದವರು ಎದುರುದಾರ 37 ಶ್ರೀಮತಿ ಉಮಾ ಎನ್.ರಾಧಕೃಷ್ಣ ಇವರಿಗೆ ಕ್ರಯ ಪತ್ರ ಬರೆದುಕೊಟ್ಟಿರುತ್ತಾರೆ. ನಿಡಿ.14 ಕ್ರಯ ಪತ್ರವನ್ನು ಎದುರುದಾರ 10 ಪಶುಪತಿ ಮತ್ತು ಮಕ್ಕಳು ಕೂಡಿಕೊಂಡು ಒಟ್ಟು ಕುಟುಂಬದ ಆಸ್ತಿ ಅಂತ ತಿಳಿದು ಬರೆದುಕೊಟ್ಟಿದ್ದಾರೆ ಎನ್ನುವುದು ಸುಳ್ಳು. ಸರ್ವೇ ನಂ. 131 ಕ್ಷೇತ್ರ 40x90 ಅಡಿ ಜಾಗವನ್ನು ಎದುರುದಾರ 10 ಇವರು ಉಮಾ ಇವರಿಗೆ ಬರೆದು ಕೊಟ್ಟಿದ್ದಾರೆ.

14.ಮೂಲ ಪುರುಷ ಎ.ಚೌಡಯ್ಯ ಇವರಿಗೆ ಎಷ್ಟು ಜನ ಮಕ್ಕಳು ಎನ್ನುವುದು ನನಗೆ ಗೊತ್ತಿಲ್ಲ. ಎದುರುದಾರ 10 ಇವರ ತಂದೆಯ ಹೆಸರು ಲೇಟ್ ತಮ್ಮಯ್ಯ ಅಲಿಯಾಸ್ ತಮ್ಮೇಗೌಡ. ಸದರಿ ಲೇಟ್ ತಮ್ಮಯ್ಯ ಅಲಿಯಾಸ್ ತಮ್ಮೇಗೌಡ ಇವರಿಗೆ ಎಷ್ಟು ಜನ ಹೆಂಡತಿಯರು ಎನ್ನುವುದು ನನಗೆ ಗೊತ್ತಿಲ್ಲ. ಲೇಟ್ ತಮ್ಮಯ್ಯ ಅಲಿಯಾಸ್ ತಮ್ಮೇಗೌಡ ಇವರಿಗೆ ಎಷ್ಟು ಜನ ಮಕ್ಕಳು ಎನ್ನುವುದು ನನಗೆ ಗೊತ್ತಿಲ್ಲ. ಲೇಟ್ ತಮ್ಮಯ್ಯ ಅಲಿಯಾಸ್ ತಮ್ಮೇಗೌಡ ಇವರಿಗೆ 3 ಜನ ಮಕ್ಕಳು, ಅವರ ಹೆಸರು 1. ಪಶುಪತಿ, 2. ರತ್ನಮ್ಮ, 3. ಪುಟ್ಟತಾಯಮ್ಮ ಎನ್ನುವುದು ನನಗೆ ಗೊತ್ತಿಲ್ಲ. ನಿಡಿ.15 ಕ್ರಯ ಪತ್ರದ ಪ್ರಕಾರ ಎದುರುದಾರ 37 ಉಮಾ ಇವರು ನಮಗೆ ದಿನಾಂಕ 22.02.2006 ರಂದು ಕ್ರಯ ಪತ್ರ ಮಾಡಿಕೊಟ್ಟಿದ್ದಾರೆ. ಕ್ರಯಪತ್ರ ಪಡೆಯುವ ಕಾಲಕ್ಕೆ ಲೇಟ್ ತಮ್ಮಯ್ಯ ಅಲಿಯಾಸ್ ತಮ್ಮೇಗೌಡ ಅಥವಾ ಎ.ಚೌಡಯ್ಯ ಇವರ ವಂಶವೃಕ್ಷ ಕೇಳಿ

ಪಡೆದಿರುವುದಿಲ್ಲ. ಸಾಕ್ಷಿ ಹೇಳುತ್ತಾರೆ ನಾವು ಕ್ರಯ ಪತ್ರ ಮಾಡಿಸಿಕೊಳ್ಳುವ ಕಾಲಕ್ಕೆ ಕೇವಲ ಎದುರುದಾರ 10 ಪಶುಪತಿ ಭೇಟಿ ಆಗಿಲ್ಲ. ನಿಮಗೆ ಯಾರಾದರೂ ಹತ್ತಿರದ ಸಂಬಂಧಿಕರು ಇದ್ದಾರಾ, ಅಕ್ಕ ತಂಗಿಯರು ಇದ್ದಾರ ಅಂತ ಎದುರುದಾರ 10 ಪಶುಪತಿ ಹತ್ತಿರ ನಾವು ಕೇಳಿ ವಿಚಾರ ಮಾಡಿರುವುದಿಲ್ಲ. ಉಮ್ಮಡಹಳ್ಳಿ ಗ್ರಾಮದ ಸರ್ವೆ ನಂ.131 ಇದು ಎ.ಚೌಡಯ್ಯ ಇವರಿಗೆ ಹೇಗೆ ಬಂತು ಅಂತ 1998 ರಲ್ಲಿ ದಾಖಲೆ ಸಂಗ್ರಹಿಸಿರುವುದಿಲ್ಲ. ಅದೇ ರೀತಿ ಮೂಲ ಪುರುಷ ಎ.ಚೌಡಯ್ಯ ಇವರಿಗೆ ಸರ್ವೆ ನಂ.131 ಹೇಗೆ ಬಂದಿತ್ತು ಅಂತ ತೋರಿಸುವ ದಾಖಲೆ ಈ ಕೇಸಲ್ಲಿ ಹಾಜರು ಮಾಡಿಲ್ಲ.

15. ಎದುರುದಾರ 37 ಉಮಾ ಇವರು ದಿನಾಂಕ 20.07.1992 ರಂದು ಮಾಡಿಕೊಟ್ಟ ಕ್ರಯ ಪತ್ರ ಕಾಲಕ್ಕೆ, ಯಾರಾದರೂ ತಂಟೆ ತಕರಾರು ಇದ್ದರೆ ತಿಳಿಸಿ ಅಂತ ಪೇಪರ್ ನಲ್ಲಿ ಪ್ರಕಟಣೆ ಕೊಟ್ಟಿರಲಿಲ್ಲ. ದಿನಾಂಕ 22.02.2006 ರಂದು ನಿಡಿ.15 ರ ಪ್ರಕಾರ ಕ್ರಯ ಪತ್ರ ಪಡೆಯುವ ಕಾಲಕ್ಕೆ ನಾವು ಯಾವುದೇ ಪೇಪರ್ ಲ್ಲಿ ಪ್ರಕಟಣೆ ಕೊಟ್ಟಿರಲಿಲ್ಲ. ಅದೇ ರೀತಿ ಸರ್ವೆ ನಂ.131 ರಲ್ಲಿ ರತ್ನಮ್ಮ, ಪುಟ್ಟತಾಯಮ್ಮ ಇವರಿಂದ, ಅವರ ಮಕ್ಕಳಿಂದ ಸರ್ವೆ ನಂ.131 ಕ್ಷೇತ್ರ 40 x 90 ಸೈಟಿಗೆ ನಾವು ಯಾವುದೇ ಕ್ರಯ ಪತ್ರ ಬರೆಸಿಕೊಂಡಿರುವುದಿಲ್ಲ. ಸದರಿ ರತ್ನಮ್ಮ, ಪುಟ್ಟತಾಯಮ್ಮ ಇವರಿಗೆ ಸೇರಿದ ಆಸ್ತಿಗಳಲ್ಲಿ ನಮಗೆ ಯಾವುದೇ ಹಕ್ಕು ಇಲ್ಲ ಎನ್ನುವುದು ನಿಜ. ಅದೇ ರೀತಿ ಎದುರುದಾರ 1 ರಿಂದ 5 ಇವರಿಗೆ ಸೇರಿದ ಆಸ್ತಿಗಳಲ್ಲಿ, ಅವರಿಗೆ ಬರಬೇಕಾದ ಹಣದಲ್ಲಿ ನಮಗೆ ಯಾವುದೇ ರೀತಿ ಪಾಲು ಕೇಳುವುದಿಲ್ಲ.

16. ಎದುರುದಾರ 10 (ಬಿ) ಚೇತನ್ ನಮ್ಮ ಜೊತೆಗೆ ಮಾತನಾಡುತ್ತಾರೆ, ಅಷ್ಟಕ್ಕೆ ಅಷ್ಟೆ. ಎದುರುದಾರ 10(ಬಿ) ಚೇತನ ಇವರು ಇದೇ ನ್ಯಾಯಾಲಯದಲ್ಲಿ ಆರ್.ಡಬ್ಲ್ಯೂ 2 ಅಂತ ಸಾಕ್ಷಿ ನುಡಿದಿದ್ದಾರೆ. ಅವರು ಕೋರ್ಟಿನಲ್ಲಿ ಸಾಕ್ಷಿ ಹೇಳಿದ ಮೇಲೆ ನನ್ನ ಕೇಸು ಬರೆಹರಿಸಿಕೊಡಿ ಅಂತ ಹೇಳಿದ್ದೇನೆ. ಉಮ್ಮಡಹಳ್ಳಿ ಗ್ರಾಮದ ಸರ್ವೇ ನಂ.131/1 ಕ್ಷೇತ್ರ 1465 Sq. meter ರೂ.1,80,56,200/- ಹಣ ಎಸ್.ಎಲ್.ಎ.ಒ ಜಮಾ ಮಾಡಿದ್ದಾರೆ. ಆ ಹಣಕ್ಕೂ ನಮಗೂ ಸಂಬಂಧ ಇಲ್ಲ ಎನ್ನುವುದು ಸುಳ್ಳು. ದಿನಾಂಕ 02.03.1978 ರ ವ್ಯವಸ್ಥ ಪತ್ರ ನೋಡಿರುತ್ತೇನೆ. ಸದರಿ ನಿಡಿ.10 ವ್ಯವಸ್ಥ ಪತ್ರ ವನ್ನು ನಾನು ಓದಿ ತಿಳಿದುಕೊಂಡಿದ್ದೇನೆ. ಅದರಲ್ಲಿ 10 ಗುಂಟೆ ಬಗ್ಗೆ ಬರೆದಿದ್ದಾರೆ. ಸದರಿ 1978 ರ ವ್ಯವಸ್ಥ ಪತ್ರ ಬಗ್ಗೆ ನಾನು ದಾಖಲೆ ನೋಡಿ ತಿಳಿದುಕೊಂಡಿದ್ದೇನೆ. 1978 ರಲ್ಲಿ ಬರೆದಂತ ವ್ಯವಸ್ಥ ಪತ್ರದ ಸರ್ವೆ ನಂ.131 ಇದು ಎ.ಚೌಡಯ್ಯ ಇವರಿಗೆ ಹೇಗೆ ಬಂದಿತ್ತು ಅನ್ನುವುದರ ಬಗ್ಗೆ ನಾನು ದಾಖಲೆ ಹಾಜರು ಮಾಡಿಲ್ಲ. ದಿನಾಂಕ 02.03.1978 ರ ವ್ಯವಸ್ಥ ಪತ್ರದಲ್ಲಿ ಗಂಡು ಮಕ್ಕಳಿಗೆ ರಿಜಿಸ್ಟರ್ ಪತ್ರದ ಮುಖಾಂತರ ಆಸ್ತಿ ಕೊಡಲಾಗಿದೆ ಅಂತ ಉಲ್ಲೇಖ ಇದೆ ಎನ್ನುವುದು ನಿಜ. ಆ ಬಗ್ಗೆ ನೋಂದಾದ ದಾಖಲೆಗಳನ್ನು ನಾನು ತೆಗೆಸಿ ನೋಡಿರುವುದಿಲ್ಲ. ದಿನಾಂಕ 20.07.1992 ಹಾಗೂ 22.02.2006 ಕ್ರಯ ಪತ್ರಗಳಿಗೆ ಎದುರುದಾರ 1 ರವರ ಹೆಂಡತಿ ರತ್ನಮ್ಮ ಸಹಿ ಮಾಡಿಲ್ಲ ಎನ್ನುವುದು ನಿಜ. ಎದುರುದಾರ 1 ರವರ ಹೆಂಡತಿ ರತ್ನಮ್ಮ, ಎದುರುದಾರ 2 ರಿಂದ 4 ರವರ ತಾಯಿ ಪುಟ್ಟತಾಯಮ್ಮ ಇವರಿಗೆ ಸೇರಿದ ಆಸ್ತಿಯನ್ನು, ಹಣವನ್ನು ಲಪಾಟಾಯಿಸಬೇಕು ಅನ್ನುವ ಉದ್ದೇಶದಿಂದ ಎದುರುದಾರ 10 ಪಶುಪತಿ ಇವರಿಂದ ಕ್ರಯ ಪತ್ರ ಸೃಷ್ಟಿ

ಮಾಡಿಸಿಕೊಂಡಿದ್ದೇವೆ ಎನ್ನುವುದು ಸುಳ್ಳು . ಉಮ್ಮಡಹಳ್ಳಿ ಗ್ರಾಮದ ಸರ್ವೆ ನಂ.131 ರಲ್ಲಿ ಆಸ್ತಿ ಮಾರಾಟ ಮಾಡಲು ಎ.ಚೌಡಯ್ಯ, ಅವರ ನಂತರ ಎದುರುದಾರ 10 ಪಶುಪತಿ ಇವರಿಗೆ ಯಾವುದೇ ಹಕ್ಕು ಇರಲಿಲ್ಲ ಅನ್ನುವುದು ಸುಳ್ಳು. ಅರ್ಜಿದಾರ ಎಸ್.ಎಲ್.ಎ.ಒ ಸ್ವಾಧೀನ ಪಡಿಸಿಕೊಂಡ ಎಲ್ಲಾ ಜಮೀನುಗಳಲ್ಲಿ ಎದುರುದಾರ 1 ರಿಂದ 5 ಇವರಿಗೆ 2/3 ಹಿಸ್ಸಾದ ಹಕ್ಕು ಇದೆ ಎನ್ನುವುದು ಸುಳ್ಳು. ಅದೇ ರೀತಿ ಸ್ವಾಧೀನ ಪಡಿಸಿಕೊಂಡ ಜಮೀನು ಸಂಬಂಧ ಜಮಾ ಮಾಡಿರುವ ಪರಿಹಾರ ಹಣದಲ್ಲಿ ಎದುರುದಾರ 1 ರಿಂದ 4 ರವರಿಗೆ 1/3 ಹಿಸ್ಸಾ ಹಕ್ಕು ಇದೆ ಎನ್ನುವುದು ಸುಳ್ಳು. ಎದುರುದಾರ 5 ಪುಟ್ಟತಾಯಮ್ಮ ಇವರಿಗೆ 1/3 ಹಿಸ್ಸಾ ಹಕ್ಕು ಇದೆ ಎನ್ನುವುದು ಸುಳ್ಳು. ಅದೇ ರೀತಿ ಪ್ರಪೋಸ್ಡ್ ಎದುರುದಾರ 47 ರಿಂದ 55 ಇವರಿಗೆ ಸೇರಬೇಕಾದ ಪರಿಹಾರ ಹಣದಲ್ಲಿ ನನಗೆ ಯಾವುದೇ ಹಕ್ಕು ಇಲ್ಲ ಎನ್ನುವುದು ಸುಳ್ಳು. ನಾನು ಹೇಗಾದರೂ ಮಾಡಿ ಹಣ ಪಡೆಯಬೇಕು ಅಂತ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

**ಉಳಿದ ಎದುರುದಾರರು ಈಗಾಗಲೇ ಪಾಟೀ ಸವಾಲು ಇರುವುದಿಲ್ಲ ಅಂತ ದಿನಾಂಕ** 02.08.2021 **ರಂದು ಹೇಳಿದ್ದಾರೆ. ಹೀಗಾಗಿ ಉಳಿದ ಎಲ್ಲಾ ಎದುರುದಾರರ ಪರವಾಗಿ ಪಾಟೀ ಸವಾಲು ಇಲ್ಲ ಅಂತ ತೆಗೆದುಕೊಳ್ಳಲಾಯಿತು.**

(ನನ್ನ ಉಕ್ತಲೇಖನ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ

(ಎಸ್.ಬಿ.ವಸ್ತ್ರಮಠ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ.